# ಧೂಪಾರತಿಯ ನೋಡುವ ಬನ್ನಿ

**(Version – 1)**

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 297.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 398.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 120.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are a mix of Ref. 1 & 2 and are not considered here.
5. **Note:** There is one more set of lyrics which are different and are listed as Version – 2. Ankita is same in both the versions.
6. **Note:** Singer has followed these lyrics.

ರಾಗ: ಗಮನಶ್ರಮ ತಾಳ: ಛಾಪು

ಧೂಪಾರತಿಯ ನೋಡುವ ಬನ್ನಿ, ನಮ್ಮ
ಗೋಪಾಲಕೃಷ್ಣ ದೇವರ ಪೂಜೆಯ || ಪ ||

ಮದ್ದಳೆ ಝಾಗಟೆ ತಾಳ ದಂಡಿಗೆ ಭೇರಿ
ತದ್ದಿಮಿ ಧಿಮಿಕೆಂದು ರಭಸಗಳು
ಅದ್ಭುತ ಶಂಖ ನಾದಗಳಿಂದಲಿ ನಮ್ಮ
ಪದ್ಮನಾಭ ದೇವರ ದಿವ್ಯ ಪೂಜೆಯ || ೧ ||

ಅಗರು ಚಂದನ ಧೂಪ ಗುಗ್ಗುಳ ಸಾಂಬ್ರಾಣಿ
ಮಘ ಮಘಿಸುವ ಧೂಪದಾರತಿಯು
ಮಿಗಿಲಾದ ಏಕಾರತಿ ಭಕ್ತಿಯಲಿ ನಮ್ಮ
ಜಗನ್ನಾಥ ವಿಠ್ಠಲ ದೇವರ ಪೂಜೆಯ || ೨ ||

ಹರಿಸರ್ವೋತ್ತಮನ ಭಕ್ತರಾಧಾರನ
ಪರಮ ಮಂಗಳ ಮೂರ್ತಿ ಪಾವನನ
ಪರದೈವವಾದಂಥ ಶ್ರೀ ರಂಗನಾಥನ
ಪುರಂದರ ವಿಠ್ಠಲ ದೇವರ ಪೂಜೆಯ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಧೂಪಾರತಿ** – ನಿರ್ಯಾಸ, ಪರಾಗ, ಕಾಷ್ಠ, ಗಂಧ ಮತ್ತು ಕೃತ್ರಿಮವೆಂಬ ಐದು ಜಾತಿಯ ಸುಗಂಧ ದ್ರವ್ಯಗಳನ್ನು ಸೇರಿಸಿ ಹೊಗೆ ಹೊರಡಿಸುವುದು ಧೂಪವೆನಿಸಿಕೊಳ್ಳುತ್ತದೆ. ಇದಕ್ಕಾಗಿ ಗುಗ್ಗುಲು, ಅಗುರು, ಉಶೀರ, ಶರ್ಕರ, ಮಧುಚಂದನ ಮೊದಲಾದ ಸಾಮಗ್ರಿಗಳನ್ನು ಬಳಸುತ್ತಾರೆ. ಹೀಗೆ ಧೂಪವನ್ನು ದೇವರೆದುರು ತೋರಿಸುವುದು, ಪ್ರದಕ್ಷಿಣಾಕಾರವಾಗಿ ಸುತ್ತುವುದು ಧೂಪಾರತಿ.

**ಏಕಾರತಿ** – ತಟ್ಟೆಯ ಮೇಲೆ ಒಂದು ಬತ್ತಿಯನ್ನಿಟ್ಟು ಅದನ್ನು ದೇವರ ಮುಂದೆ ಬೆಳಗುವುದು.

**ಅಗರು** = ಒಂದು ಸುಗಂಧ ದ್ರವ್ಯ

**ಸಾಮ್ರಾಣಿ** = ಲೋಭಾನ, ಧೂಪ

**Classification:** Keerthane
**Ankita:** purandara vittala
**Location:** Srirangam, TN
**Category:** Arati song
**Sub-Category:** arati, Gopala, Krishna, deva, puje, shankha, bhakti, hari sarvottama, mangala, daiva, ranga,
**Pravachana:** NA
**Explanation:** NA